

# ದಂಡಕಾರಣ್ಯ

■ ನರಸಿಂಹಾರೆಡ್ಡಿ ಯಂಕಮೊಳ,
ಸೇಡಂ

ಕುಂತಲ ದೇಶದ ಮಹಾರಾಜ ಚಂದ್ರಸೇನರಿಗೆ ಆರೋಗ್ಯ ಸಮಸ್ಯೆ ಉಂಟಾಯಿತು.ರಾಜವೈದ್ಯರು ಎಷ್ಟು ಸಲ ಪರೀಕ್ಷಿಸಿ ಚಿಕಿತ್ಸೆ ನೀಡಿದರೂ ಯಾವುದೇ ಫಲ ಸಿಗಲಿಲ್ಲ. ದಿನದಿನಕ್ಕೂ ಮಹಾರಾಜರ ಆರೋಗ್ಯ ಕ್ಷೀಣಿಸತೊಡಗಿತು. ಕೊನೆಗೆ ಮಹಾರಾಜರಿಗೆ ಬಂದ ಕಾಯಿಲೆಯನ್ನು ಗುಣಮಾಡಬಲ್ಲ ವೈದ್ಯ ದಂಡಕಾರಣ್ಯದ ರಾಜ ವನಮಾಲಿಯ ಆಸ್ಥಾನದಲ್ಲಿರುವನೆಂದು ತಿಳಿಯಿತು.

ಅವರನ್ನು ಕರೆತರುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಚಂದ್ರಸೇನರ ತಂದೆ ಬಿಂದುಸೇನ ಮಹಾರಾಜ ವನಮಾಲಿಯ ತಂದೆಯನ್ನು ಯಾವುದೋ ಕಾರಣಕ್ಕಾಗಿ ರಾಜ್ಯ ಬಹಿಷ್ಕಾರ ಮಾಡಿದ್ದರು. ಆಗ ಅವರು ಆ ದಂಡಕಾರಣ್ಯದಲ್ಲಿ ಒಂದು ಸಣ್ಣ ರಾಜ್ಯಕಟ್ಟಿ ಆಳ್ವಿಕೆ ಮಾಡತೊಡಗಿದರು. ಬರುಬರುತ್ತಾ ಅದೇ ರಾಜ್ಯ ವಿಸ್ತಾರವಾಗಿ ದಂಡಕಾರಣ್ಯವೇ ವನಮಾಲಿಯ ರಾಜ್ಯವಾಯಿತು. ಕುಂತಲ ದೇಶದ ಯಾರಿಗೂ ದಂಡಕಾರಣ್ಯದಲ್ಲಿ ಪ್ರವೇಶವಿರಲಿಲ್ಲ. ಪರಿಸ್ಥಿತಿ ಹೀಗಿರಬೇಕಾದರೆ, ನಾನು ಹೋಗಿ ಅವರನ್ನು ಒಪ್ಪಿಸಿ ಕರೆತರುತ್ತೇನೆ ಎಂದು ಚಂದ್ರಸೇನರ ಮಗ ಯುವರಾಜ ವಿಕ್ರಮಸೇನನು ಹೇಳಿದನು. ಮಹಾರಾಜರು ನಿನ್ನ ಜೊತೆಗೆ ಬ್ರಹ್ಮದತ್ತನನ್ನೂ ಕರೆದುಕೊಂಡು ಹೋಗು, ನಿನಗೆ ಆತ ಸಹಾಯವಾಗುತ್ತಾನೆಂದು ಹೇಳಿದರು. ಬ್ರಹ್ಮದತ್ತ, ವಿಕ್ರಮಸೇನರು ಮಾರುವೇಷದಲ್ಲಿ ದಂಡಕಾರಣ್ಯದ ಕಡೆಗೆ ಹೊರಟರು. ಮೊದಲೇ ನಿರ್ಧರಿಸಿದ ಹಾಗೆ, ವನಮಾಲಿ ರಾಜ್ಯದ ಸೈನಿಕರ ಕೈಗೆ ಸಿಕ್ಕಿಬಿದ್ದರು. ಸೈನಿಕರು ಇಬ್ಬರನ್ನೂ ಹಿಡಿದು ರಾಜಸಭೆಗೆ ಕರೆತಂದರು. ನಮ್ಮ ರಾಜ್ಯದ ಗಡಿಯಲ್ಲಿ ನಿಮಗೇನು ಕೆಲಸ ಹೇಳಿ? ಯಾರು ನೀವು? ಏತಕ್ಕೆ ಈಕಡೆ ಬಂದಿರಿ? ಎಂದೆಲ್ಲಾ ಪ್ರಶ್ನೆಗಳಾದವು. ಬ್ರಹ್ಮದತ್ತನು ನಿಧಾನವಾಗಿ ಉತ್ತರಿಸಿದನು,ನಾವು ಕುಂತಲ ರಾಜ್ಯದವರು ಪ್ರಭು, ವೃತ್ತಿಯಲ್ಲಿ ವೈದ್ಯರು.

ಅಲ್ಲಿನ ಮಹಾರಾಜರಿಗೆ ಆರೋಗ್ಯ ಸಮಸ್ಯೆ ಎದುರಾಗಿದೆ. ಅವರ ಆರೋಗ್ಯ ಸಮಸ್ಯೆ ನಿವಾರಿಸಿದವರಿಗೆ ಅರ್ಧ ರಾಜ್ಯ ಕೊಟ್ಟುಬಿಡುತ್ತೇವೆಂದು. ರಾಜ್ಯದ ತುಂಬೆಲ್ಲಾ ಡಂಗೂರ ಸಾರಿಸಿದ್ದಾರೆ. ಆ ಕಾಯಿಲೆಗೆ ಸಂಬಂಧಿಸಿದ ಔಷಧಿ ನಿಮ್ಮ ರಾಜ್ಯದಲ್ಲಿ ಲಭ್ಯವಿದೆಯೆಂದು ಕೇಳಿದ್ದೆವೆ, ಅದಕ್ಕೆ ಅದನ್ನು ಹುಡುಕುತ್ತಾ ಬಂದೆವು ಪ್ರಭು ಎಂದ. ವಿಕ್ರಮಸೇನನ್ನು ತೋರಿಸಿ ಇವನು ನನ್ನ ಅಳಿಯ ಪ್ರಭು, ನಾವು ಬಡವರು. ನಮಗೆ ಏನೂ ಆಸ್ತಿಯಿಲ್ಲ ಅದೇ ಕಾರಣದಿಂದ,ನನ್ನ ಅಳಿಯನಿಗೆ ಯಾರೂ ಹೆಣ್ಣುಕೊಡುತ್ತಿಲ್ಲ.

ಅರ್ಧರಾಜ್ಯ ಬಂದರೆ ಇವನನ್ನೇ ರಾಜನನ್ನಾಗಿ ಮಾಡುತ್ತೇನೆ, ಆಗ ಇವನಿಗೆ ಬೇಗ ಮದುವೆಯಾಗುತ್ತದೆ ಎಂದು ಹೇಳಿದನು. ಅದಕ್ಕೆ ವನಮಾಲಿ ರಾಜನು, ನನ್ನ ತಂದೆಯವರಿಗೆ ಮಾಡಿದ ಅನ್ಯಾಯಕ್ಕೆ ತಕ್ಕ ಶಾಸ್ತಿಯಾಗಿದೆ. ಎಂತಹ ಕಾಯಿಲೆಯನ್ನೂ ನಿವಾರಿಸಬಲ್ಲ ಗಿಡಮೂಲಿಕೆಗಳು, ವೈದ್ಯರು ನಮ್ಮ ರಾಜ್ಯದಲ್ಲಿದ್ದಾರೆ. ಆದರೆ ಆ ಚಂದ್ರಸೇನನಿಗೆ ನಾವು ಸಹಾಯ ಮಾಡುವದಿಲ್ಲ. ನಿಮಗೂ ಕುಂತಲ ರಾಜರಿಗೂ ಏಕೆ ವೈರುಧ್ಯ ಮಹಾರಾಜ, ಎಂದು ಬ್ರಹ್ಮದತ್ತ ಕೇಳಿದನು. ನಮ್ಮ ತಂದೆ, ಬಿಂದುಸೇನ ಮಹಾರಾಜರ ಸೈನ್ಯದ ಸೇನಾಧಿಪತಿಯಾಗಿದ್ದರು.